ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-12-1978.

# *ಸರ್ವ ಖಜಾನೆಗಳ ಬೀಗದಕ್ಕೈ ಏಕ್‌ನಾಮಿ ಆಗುವುದು.*

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಬಾಪ್‌ದಾದಾ ಸದಾ ಮಕ್ಕಳ ಭಾಗ್ಯವನ್ನು ನೋಡಿ ಸಂತೋಷ ಪಡುತ್ತಾರೆ. ಆಹಾ! ಎಂತಹ ಅದೃಷ್ಟ ಆಗಿದೆ. ಎಂತಹ ಶ್ರೇಷ್ಠ ಅದೃಷ್ಟವೆಂದರೆ ತಂದೆಯನ್ನೂ ಸಹ ನಿಮ್ಮ ಸ್ನೇಹದ ಸಂಬಂಧದಿಂದ ನಿರಾಕಾರ ಆಗಿರುವವರನ್ನು ಸಾಕಾರ ಮಾಡಿಬಿಡುತ್ತೀರಿ. ಮಾತಿನಿಂದ ಅತೀತವಾಗಿರುವ ತಂದೆಯನ್ನು ಮಾತಿನಲ್ಲಿ ತರುತ್ತೀರಿ. ಸ್ವಯಂ ಭಗವಂತನನ್ನು ಎಂತಹ ಸ್ವರೂಪದಲ್ಲಿ ಬೇಕಾದರೆ ಅಂತಹ ಸ್ವರೂಪದಲ್ಲಿ ತರಬಲ್ಲಿರಿ. ಮಾಲಿಕನನ್ನು ಸೇವಾಧಾರಿಯನ್ನಾಗಿ ಮಾಡಿಬಿಡುತ್ತೀರಿ. ತಂದೆಯ ಸರ್ವ ಖಜಾನೆಗಳಿಗೆ ಅಧಿಕಾರಿಯಾಗಿ, ತಂದೆಯನ್ನೂ ಸ್ವಯಂ ನಿಮಗೆ ಸಮರ್ಪಣೆ ಮಾಡಿಕೊಳ್ಳುವ ಕೀಲಿ ಕೈ ಮಕ್ಕಳ ಹತ್ತಿರ ಇದೆ. ಯಾವ ಮಕ್ಕಳ ಹತ್ತಿರ ಇಂತಹ ಕೀಲಿ ಕೈ ಇದೆಯೋ ಅವರಿಗಿಂತಲೂ ಶ್ರೇಷ್ಠರು ಯಾರಾದರೂ ಇರಲು ಸಾಧ್ಯವಿದೆಯೇ? ಅಂತಹ ಬೀಗದ ಕೈಯನ್ನು ಕಾಪಾಡಿಕೊಳ್ಳುವ ಜ್ಞಾನಪೂರ್ಣರೂ ಹಾಗೂ ಬುದ್ಧಿವಂತರೂ ಆಗಿದ್ದೀರಾ? ಬೀಗದ ಕೈಯನ್ನಂತೂ ತಂದೆಯು ಕೊಟ್ಟುಬಿಟ್ಟಿದ್ದಾರೆ. ಈಗ ಬೀಗದ ಕೈ ಮೂಲಕ ಏನು ಬೇಕೋ ಅದನ್ನು ನೀವು ಒಂದು ಕ್ಷಣದಲ್ಲಿ ಪ್ರಾಪ್ತಿ ಮಾಡಿಕೊಳ್ಳಬಹುದು. ರಚನೆಕಾರನೇ ಸೇವಾಧಾರಿಯಾದ ಮೇಲೆ ಸರ್ವ ರಚನೆಯು ಶ್ರೇಷ್ಠ ಆತ್ಮರಾದ ನಿಮ್ಮ ಮುಂದೆ ಸೇವೆ ಮಾಡಲು ಬಂಧಿಸಲ್ಪಟ್ಟಿವೆ. ಅಸುರೀಯ ರಾವಣನು ತನ್ನ ವಿಜ್ಞಾನದ ಶಕ್ತಿಯಿಂದ ಪ್ರಕೃತಿ ಅಥವಾ ಪಂಚತತ್ವಗಳನ್ನು ಇಂದೂ ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದಾನೆ. ಆದ್ದರಿಂದ ನೀವು ಈಶ್ವರೀಯ ಸಂತಾನರು ಮಾಸ್ಟರ್ ರಚನೆಕಾರರು ಮಾಸ್ಟರ್ ಸರ್ವಶಕ್ತಿವಂತರ ಮುಂದೆ ಈ ಪ್ರಕೃತಿ ಹಾಗೂ ಪರಿಸ್ಥಿತಿಯು ದಾಸಿ ಆಗಲು ಸಾಧ್ಯವಿಲ್ಲವೇ, ನಿಮ್ಮ ಶಾಂತಿಯ ಶಕ್ತಿಯನ್ನು ಚೆನ್ನಾಗಿ ಅರಿತುಕೊಂಡಿದ್ದೀರಾ? ಅಥವಾ ಬಹಳ ಶಕ್ತಿಗಳು ದೊರೆತ ಕಾರಣದಿಂದ ಅವುಗಳ ಮಹತ್ವವನ್ನು ಮರೆತುಬಿಡುತ್ತೀರೋ? ಯಾವಾಗ ವಿಜ್ಞಾನದ ಅಣುಶಕ್ತಿಯು ಮಹಾಕರ್ತವ್ಯವನ್ನು ಮಾಡಬಲ್ಲದೋ, ಆತ್ಮಿಕ ಶಕ್ತಿ ಹಾಗೂ ಪರಮಾತ್ಮನ ಶಕ್ತಿಯು ಏನು ತಾನೇ ಮಾಡಲಾರದು ಎನ್ನುವುದರ ಅನುಭವವನ್ನು ಈಗಲೇ ಬಹಳ ಸ್ವಲ್ಪ ಹಾಗೂ ಒಮ್ಮೊಮ್ಮೆ ಮಾಡುತ್ತೀರಿ. ಪರಮಾತ್ಮನ ಶಕ್ತಿಯನ್ನು ನಿಮ್ಮದಾಗಿ ಮಾಡಿಕೊಳ್ಳಬಲ್ಲಿರಾ. ರೂಪ ಪರಿವರ್ತನೆಯನ್ನು ಮಾಡಬಲ್ಲಿರಾ? ಆದ್ದರಿಂದ ಪ್ರಕೃತಿ ಹಾಗೂ ಪರಿಸ್ಥಿತಿಯ ರೂಪ ಮತ್ತು ಗುಣವನ್ನು ಪರಿವರ್ತನೆ ಮಾಡಲಾರಿರಾ? ತಮೋಗುಣಿ ಪ್ರಕೃತಿಯನ್ನು ಸ್ವಯಂನ ಸತ್ವಗುಣಿ ಸ್ಥಿತಿಯಿಂದ ಪರಿವರ್ತನೆ ಮಾಡಲಾರಿರಾ? ಪರಿಸ್ಥಿತಿಯ ಮೇಲೆ ಸ್ವಸ್ಥಿತಿಯ ಮೂಲಕ ವಿಜಯವನ್ನು ಪಡೆಯಲಾರಿರಾ?

ಬಾಪ್‌ದಾದಾ ಮಕ್ಕಳ ಶ್ರೇಷ್ಠ ಪ್ರಾಪ್ತಿಯನ್ನು ನೋಡಿ, ನೀವು ಎಷ್ಟು ಶ್ರೇಷ್ಠ ಆತ್ಮರಾಗಿದ್ದೀರೆಂದರೆ ಒಬ್ಬೊಬ್ಬ ಮಗು ಅದ್ಭುತ ಕಾರ್ಯವನ್ನು ಮಾಡಬಲ್ಲಿರಿ. ಆದ್ದರಿಂದ ಎಲ್ಲಾ ಮಕ್ಕಳೂ ಸೇರಿ ಇನ್ನೆಷ್ಟು ಮಾಡಬಹುದು? ಬೀಗದ ಕೈಯಂತು ತುಂಬಾ ಶ್ರೇಷ್ಠವಾದುದು ದೊರೆತಿದೆ. ಬೀಗದ ಕೈಯನ್ನು ಪೂಜಿಸುವವರು ಉಪಯೋಗಿಸುವುದಿಲ್ಲ. ಎಲ್ಲರಿಗೂ ಬೀಗದ ಕೈ ದೊರೆತಿದೆ. ಒಬ್ಬೊಬ್ಬರಿಗೆ ಮಾತ್ರ ಅಲ್ಲ. ಹೊಸಬರು, ಹಳಬರು, ಸಣ್ಣವರು, ದೊಡ್ಡವರು ಎಲ್ಲರೂ ಇದಕ್ಕೆ ಅಧಿಕಾರಿಗಳೇ. ಹೇಗೆ ಈಗಿನ ಕಾಲದ ಪ್ರಪಂಚದಲ್ಲಿಯೂ ಕೂಡ ಯಾರಾದರೂ ಅತಿಥಿಯ ಸ್ವಾಗತ ಮಾಡಬೇಕಾದರೆ ನಗರದ ಬೀಗದ ಕೈಯನ್ನು ಕಾಣಿಕೆಯಾಗಿ ಕೊಡುತ್ತಾರಲ್ಲವೇ, ಬಾಪ್‌ದಾದಾ ಸಹ ಮಕ್ಕಳಿಗೆ ಸ್ವಯಂನ ಹಾಗೂ ಖಜಾನೆಗಳ ಬೀಗದ ಕೈಯನ್ನು ಬರುತ್ತಲೇ ಕೊಟ್ಟಿದ್ದಾರೆ. ಎಂತಹ ಮಂತ್ರಗಾರಿಕೆಯ ಬೀಗದ ಕೈ ಎಂದರೆ ಇದರಿಂದ ಯಾವ ಶಕ್ತಿಯ ಆಹ್ವಾನ ಮಾಡುತ್ತೀರೋ ಆ ಶಕ್ತಿಯ ಸ್ವರೂಪರಾಗಬಹುದು. ಒಂದು ಸೆಕೆಂಡ್ ನಲ್ಲಿ ಈ ಮಂತ್ರಗಾರಿಕೆಯ ಬೀಗದ ಕೈ ಮೂಲಕ ಯಾವ ಲೋಕದ ನಿವಾಸಿ ಬೇಕಾದರೆ ಆ ಲೋಕದ ನಿವಾಸಿಯಾಗಬಹುದು, ಯಾವ ಕಾಲವನ್ನು ಬೇಕಾದರೆ ಆ ಕಾಲವನ್ನು ಅರಿತುಕೊಳ್ಳುವ ಆತ್ಮಿಕ ಜ್ಯೋತಿಷಿ ಆಗಬಹುದು. ಸಂಕಲ್ಪ ಶಕ್ತಿಯನ್ನು ಯಾವ ವೇಗದಿಂದ ಯಾವ ಮಾರ್ಗದಲ್ಲಿ ತೆಗೆದುಕೊಂಡು ಹೋಗಲು ಬಯಸಿದರೆ ಅದೇ ರೀತಿಯಲ್ಲಿ ಸಂಕಲ್ಪ ಶಕ್ತಿಯ ಅಧಿಕಾರಿ ಆಗಬಹುದು. ಇಂತಹ ಬೀಗದ ಕೈಯನ್ನು ಕಾರ್ಯದಲ್ಲಿ ಏಕೆ ಉಪಯೋಗಿಸುವುದಿಲ್ಲ. ಮಹತ್ವವನ್ನು ಅರಿತುಕೊಂಡಿಲ್ಲವೇ? ಒಂದು ಮೂಲೆಯಲ್ಲಿ ಇಟ್ಟುಬಿಡುವ ಸಂಸ್ಕಾರವು ಪ್ರಕಟ ಆಗುತ್ತದೆಯೇ ಉತ್ತಮವಾದ ವಸ್ತುವನ್ನು ಎಚ್ಚರಿಕೆಯಿಂದ ಒಂದು ಕಡೆ ಇಟ್ಟುಬಿಡುತ್ತೀರೇ ಹೊರತು ಸಮಯಕ್ಕೆ ಕಾರ್ಯದಲ್ಲಿ ಉಪಯೋಗಿಸಿಕೊಳ್ಳುವುದಿಲ್ಲ. ಆದರೆ ಈ ಬೀಗದ ಕೈಯನ್ನು ಪ್ರತಿಯೊಂದು ಕಾರ್ಯದಲ್ಲಿ ಉಪಯೋಗಿಸಿರಿ. ಬೀಗದ ಕೈಯನ್ನು ಉಪಯೋಗಿಸಿ, ಖಜಾನೆಯನ್ನು ತೆಗೆದುಕೊಳ್ಳಿರಿ. ಇದರಲ್ಲಿ ಉಳಿತಾಯ ಮಾಡಬೇಡಿ ಆದರೆ ಒಬ್ಬರ ಹೆಸರನ್ನೇ(ಏಕ್ ನಾಮಿ) ತೆಗೆದುಕೊಳ್ಳುವವರಾಗಿರಿ. ಒಬ್ಬರ ಹೆಸರನ್ನು ತೆಗೆದುಕೊಳ್ಳುವುದೇ ಬೀಗದ ಕೈಯನ್ನು ಉಪಯೋಗಿಸುವ ವಿಧಾನ ಆಗಿದೆ. ಹಾಗಿರುವಾಗ ಇದನ್ನು ಮಾಡಲು ಬರುವುದಿಲ್ಲವೇ. ಈಗಿನ ಕಾಲದಲ್ಲಂತು ಬೀಗದ ಕೈಯನ್ನು ಜೊತೆಯಲ್ಲಿ ಇಟ್ಟುಕೊಳ್ಳುವುದು. ಒಂದು ಸಂಪ್ರದಾಯ (ಫ್ಯಾಷನ್) ಆಗಿದೆ. ಬಹುಮಾನವಾಗಿಯೂ ಬೀಗದ ಕೈಯ ಸರಪಣಿಯನ್ನು ಕೊಡುತ್ತಾರೆ. ಇದನ್ನು ಕಾಪಾಡಿಕೊಳ್ಳುವುದು ಕಷ್ಟ ಎನಿಸುತ್ತದೆಯೇ? ಯಾವುದೇ ಕರ್ಮವನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಎಂತಹ ಕರ್ಮವೋ ಅಂತಹ ಶಕ್ತಿಯ ಆವಾಹನೆಯನ್ನು ಈ ಬೀಗದ ಕೈ ಮೂಲಕ ಮಾಡಿರಿ. ಆಗ ಪ್ರತಿಯೊಂದು ಶಕ್ತಿಯು ಮಾಸ್ಟರ್ ರಚನೆಕಾರನಾದ ನಿಮ್ಮ ಸೇವಾಧಾರಿ ಆಗಿ ಸೇವೆಯನ್ನು ಮಾಡುವುದು. ನೀವು ಆಹ್ವಾನ ಮಾಡುವುದಿಲ್ಲ ಅದಕ್ಕೆ ಬದಲಾಗಿ ಕರ್ಮದ ಗಡಿಬಿಡಿಯಲ್ಲಿ ಬಂದು ಆಹ್ವಾನದ ಬದಲು ಸಂಧಿಗ್ಧದಲ್ಲಿ, ಬಂದುಹೋಗುವ ಚಕ್ರದಲ್ಲಿ ಬಂದುಬಿಡುತ್ತೀರಿ. ಇದು ಒಳ್ಳೆಯದೋ ಅಥವಾ ಕೆಟ್ಟದ್ದೋ, ಸಫಲತೆ ಆಗುವುದೋ ಅಥವಾ ವಿಫಲ ಆಗುವುದೋ ಎನ್ನುವ ಸಂದಿಗ್ಧದ ಚಕ್ರದಲ್ಲಿ ಬಂದುಬಿಡುತ್ತೀರಿ. ಆವಾಹನೆ ಮಾಡಿ ಅರ್ಥಾತ್ ಮಾಲಿಕರಾಗಿ ಆಜ್ಞೆಮಾಡಿರಿ. ಈ ಸರ್ವಶಕ್ತಿಗಳೂ ನಿಮ್ಮ ಭುಜಗಳ ಸಮಾನ ಆಗಿವೆ. ಆದ್ದರಿಂದ ನಿಮ್ಮ ಭುಜಗಳು ನಿಮ್ಮ ಆಜ್ಞೆಯಿಲ್ಲದೆ ಏನಾದರೂ ಮಾಡಲು ಸಾಧ್ಯವಿದೆಯೇ? “ಸಹನ ಶಕ್ತಿಯೇ ಈ ಕಾರ್ಯವನ್ನು ಸಫಲ ಮಾಡು” ಎಂದು ಆಜ್ಞೆಮಾಡಿರಿ. ಆಗ ಸಫಲತೆಯು ಸದಾ ಆಗಿರುವುದನ್ನು ನೋಡುವಿರಿ. ಆದರೆ ನೀವು ಆಜ್ಞೆ ಮಾಡುವುದಿಲ್ಲ, ಮತ್ತೇನು ಮಾಡುತ್ತೀರಿ ಗೊತ್ತಿದೆಯೇ? ಆಜ್ಞೆ ಮಾಡುವುದಕ್ಕೆ ಬದಲಾಗಿ ಹೆದರುತ್ತೀರಿ. ಹೇಗೆ ಸಹನೆ ಮಾಡುವುದು, ಹೇಗೆ ಎದುರಿಸಲು ಸಾಧ್ಯವಾಗುತ್ತದೆ, ಮಾಡಬಲ್ಲೆನೋ ಅಥವಾ ಮಾಡಲಾರೆನೋ ಎಂದು ಹೆದರುತ್ತೀರಿ. ಈ ಪ್ರಕಾರದ ಭಯದ ಕಾರಣದಿಂದ ಆಜ್ಞೆ ಮಾಡಲು ಶಕ್ತರಾಗುವುದಿಲ್ಲ. ಈಗ ಏನು ಮಾಡುವಿರಿ, ಹೆದರುವಿರೋ ಅಥವಾ ಆಜ್ಞೆ ಮಾಡುವಿರೋ, ಮಹಾಕಾಲನ ಮಕ್ಕಳೂ ಅಂಜಿದರೆ ಮತ್ತೆ ನಿರ್ಭಯರಾಗುವವರು ಯಾರು? ಆದ್ದರಿಂದ ಪ್ರತಿಯೊಂದು ವಿಷಯದಲ್ಲಿಯೂ ನಿರ್ಭಯರಾಗಿರಿ. ಎಚ್ಚರಗೇಡಿತನ ಹಾಗೂ ಆಲಸ್ಯದಲ್ಲಿ ಮಾತ್ರ ನಿರ್ಭಯರಾಗಬೇಡಿರಿ. ಮಾಯಾಜೀತ್ ರಾಗುವುದರಲ್ಲಿ ನಿರ್ಭಯರಾಗಿರಿ. ಈಗ ಮಂತ್ರಗಾರಿಕೆಯ ಬೀಗದ ಕೈ ಬಗ್ಗೆ ತಿಳಿದುಕೊಂಡಿದ್ದೀರಾ. ಉಡುಗೊರೆಯನ್ನು ಕಾಪಾಡಿಕೊಳ್ಳುವುದನ್ನು ಕಲಿಯಿರಿ ಹಾಗೂ ಸದಾ ಕಾರ್ಯದಲ್ಲಿ ಉಪಯೋಗಿಸಿರಿ. ಒಳ್ಳೆಯದು.

**ಇಂತಹ ಶ್ರೇಷ್ಠ ಅದೃಷ್ಟವುಳ್ಳವರೂ, ಆತ್ಮಿಕ ಶಕ್ತಿ ಸ್ವರೂಪರೂ, ಮಾಸ್ಟರ್ ರಚನೆಕಾರರೂ, ಪ್ರಕೃತಿ ಹಾಗೂ ಪರಿಸ್ಥಿತಿಗಳನ್ನು ಅಧಿಕಾರದಿಂದ ಜಯಿಸುವವರೂ ಆದ ಸದಾ ವಿಜಯಶಾಲೀ ಮಕ್ಕಳಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

**ದೀದೀಜಿ**:- ಸಂಗಮಯುಗದ ರಾಜರುಗಳ ಸಾಕ್ಷಾತ್ಕಾರ ಆಗುತ್ತದೆಯೇ? ರಾಜವಂಶವು ಇಲ್ಲಿಂದಲೇ ಪ್ರಾರಂಭವಾಗುತ್ತದೆ, ಈಗಲೇ ರಾಜರು ಹಾಗೂ ಪ್ರಜೆಗಳು ಇಬ್ಬರ ಸಂಸ್ಕಾರವೂ ಪ್ರತ್ಯಕ್ಷರೂಪದಲ್ಲಿ ಕಂಡುಬರುತ್ತಿದೆಯೇ? ಪ್ರಜೆ ಎಂದರೆ ಸದಾ ಪ್ರತಿಯೊಂದು ವಿಷಯದಲ್ಲಿಯೂ ಅಧೀನತೆಯ ಸಂಸ್ಕಾರ. ಅವರಿಗೆ ಎಷ್ಟೇ ಅಧಿಕಾರೀತನದ ಮಟ್ಟದ ಸಿಂಹಾಸನವನ್ನು ಕೊಟ್ಟರೂ ಅವರು ಸಿಂಹಾಸನಕ್ಕೆ ಯೋಗ್ಯರು ಆಗಲಾರರು. ಸದಾ ನಿರ್ಬಲ ಹಾಗೂ ಹೇಡಿಗಳಂತೆ ಕಂಡುಬರುವರು. ಅವರಿಗೆ ಸ್ವಂತ ಧೈರ್ಯ ಇರುವುದಿಲ್ಲ. ಆದರೆ ಇತರರಿಗೆ ಧೈರ್ಯವನ್ನು ತುಂಬಿ ಸಹಯೋಗವನ್ನು ನೀಡಿದರೆ ಕಾರ್ಯವನ್ನು ಸಫಲ ಮಾಡಬಲ್ಲರು. ಸಹಯೋಗವೇ ಬೇರೆ, ಮತ್ತೆ ಧೈರ್ಯವನ್ನು ಹೆಚ್ಚಿಸಲು ನೀಡುವ ಸಹಯೋಗವೇ ಬೇರೆ. ಅನ್ಯರು ಧೈರ್ಯವನ್ನು ಕೊಟ್ಟರೆ ಈ ಕಾರ್ಯವನ್ನು ಮಾಡಬಲ್ಲೆನು ಎಂದು ಹೇಳುವುದು ಅಧಿಕಾರೀತನದ ಲಕ್ಷಣ ಅಲ್ಲ. ಧೈರ್ಯವಹಿಸಿದರೆ ಸಹಯೋಗಕ್ಕೆ ಪಾತ್ರರು ತಾನಾಗಿಯೇ ಆಗಿಬಿಡುವರು. ಆದ್ದರಿಂದಲೇ "ರಾಜವಂಶವು ಕಾಣಬರುತ್ತಿದೆಯೇ" ಎಂದು ಕೇಳಿದ್ದು, ಯಾವಾಗ ಈಗಿನ ರಾಜವಂಶವು ಪ್ರತ್ಯಕ್ಷ ಆಗುವುದೋ ಆಗ ಪ್ರತ್ಯಕ್ಷತೆಯು ಆಗುವುದು, ರಾಜವಂಶದವರು ಎಷ್ಟುಮಂದಿ ಪ್ರತ್ಯಕ್ಷ ಆಗಿದ್ದಾರೆ. ರಾಜರು ರಾಣಿಯರು ಎಷ್ಟು ಆಗಿದ್ದಾರೆ? ರಾಜ ಹಾಗೂ ರಾಣಿಯಲ್ಲಿಯ ವ್ಯತ್ಯಾಸವೂ ಇರುವುದು. ಮೊದಲನೆಯವರು ಹಾಗೂ ಎರಡನೆಯವರು ಎನ್ನುವ ಅಂತರವಂತೂ ಇರುವುದಲ್ಲವೇ. ಈಗ ಇದರಮೇಲೆ ಸಂಭಾಷಣೆ ಮಾಡಿರಿ, ರಾಜರ ಲಕ್ಷಣವು ಏನಾಗಿರುವುದು. ರಾಣಿಯ ಲಕ್ಷಣವು ಏನಾಗಿರುವುದು. ರಾಜವಂಶದ ಮಕ್ಕಳಲ್ಲಿಯೂ ವಂಶದ ಸಂಸ್ಕಾರವಂತೂ ಇರುತ್ತದೆಯಲ್ಲವೇ. ಇದರ ಬಗ್ಗೆ ಆತ್ಮಿಕ ಸಂಭಾಷಣೆ ಮಾಡಿರಿ, ಒಳ್ಳೆಯದು.

**ಕುಮಾರರೊಂದಿಗೆ**:- ಕುಮಾರರ ಚಿತ್ರವನ್ನು ಸದಾ ತಂದೆಯ ಜೊತೆಯಲ್ಲಿ ಇರುವ ಹಾಗೆ ತೋರಿಸಿದೆ. ನಿನ್ನ ಜೊತೆಯಲ್ಲಿಯೇ ಆಟವಾಡಬೇಕು, ನಿನ್ನ ಜೊತೆಯಲ್ಲಿಯೇ ಊಟಮಾಡಬೇಕು, ಎನ್ನುವ ಚಿತ್ರವನ್ನು ಸಖನ ರೂಪದಲ್ಲಿ ನೋಡಿದ್ದೀರಲ್ಲವೇ, ಸಖ ಎಂದರೆ ಜೊತೆಗಾರ, ಹೀಗೆ ಕುಮಾರರನ್ನು ಸಖನ ರೂಪದಲ್ಲಿ ಜೊತೆಗಾರರಾಗಿ ತೋರಿಸಲಾಗಿದೆ, ಗೊಲ್ಲರ ಬಾಲಕನ ರೂಪದಲ್ಲಿ ತೋರಿಸಿದ್ದಾರಲ್ಲವೇ. ಆದ್ದರಿಂದ ನಿಮ್ಮನ್ನು ಸದಾ ತಂದೆಯ ಜೊತೆಗಾರನೆಂದು ತಿಳಿದುಕೊಂಡು "ನಿನ್ನೊಂದಿಗೇ ಊಟ ಮಾಡುತ್ತೇನೆ, ನಿನ್ನೊಂದಿಗೇ ಕುಳಿತುಕೊಳ್ಳುತ್ತೇನೆ.. ಎನ್ನುವಂತೆ. ಎಲ್ಲಾ ಕುಮಾರರೂ ಯುಗಲ್ ಮೂರ್ತಿ ಆಗಿ ನಡೆದುಕೊಳ್ಳುತ್ತೀರಾ, ಜೋಡಿ ಆಗಿದ್ದೀರೋ ಅಥವಾ ಏಕಾಂಗಿ ಆಗಿದ್ದೀರೋ. ಎಂದೂ ಒಂಟಿ ಆಗಿರುವ ಸಂಕಲ್ಪವನ್ನು ಮಾಡಬೇಡಿ. ಜೊತೆಗಾರರನ್ನು ಸದಾ ಜೊತೆ ಇಟ್ಟುಕೊಂಡರೆ ಸದಾ ಅನಂದದಿಂದಿರುವಿರಿ. ಹಾಗೂ ಹಗಲೂ, ರಾತ್ರಿ ಆನಂದದಲ್ಲಿ ನರ್ತಿಸುತ್ತಾ ನಿಮ್ಮ ಹಾಗೂ ಇತರರ ಭವಿಷ್ಯವನ್ನು ರೂಪಿಸುವಿರಿ, ಒಂಟಿಯಾಗಿದ್ದೇನೆ ಎಂದು ಎಂದಿಗೂ ತಿಳಿಯಬೇಡಿರಿ. ಏಕಾಂಗಿಯಾಗಿದ್ದೇನೆಂದು ತಿಳಿದರೆ ಮಾಯೆಯು ನಿಮ್ಮನ್ನು ಸೋಲಿಸಿದಂತೆ ತಿಳಿಯಿರಿ, ನಾನು ಒಂಟಿಯಾಗಿದ್ದೇನೆ. ಎನ್ನುವುದೇ ಕುಮಾರರ ದೂರು ಆಗಿದೆ, ಈ ಜೊತೆಗಾರನಂತೂ ಸುಖ, ದುಃಖ ಎರಡರಲ್ಲಿಯೂ ಜೊತೆಗಾರ ಆಗಿದ್ದಾರೆ. ಆ ಸಂಗಾತಿಯು ತಲೆಯನ್ನು ಕೆಡಿಸಿಬಿಡುತ್ತಾರೆ. ಆದ್ದರಿಂದ ನೀವು ಜೋಡಿ ಆಗಿದ್ದೀರಲ್ಲವೇ. ಪ್ರವೃತ್ತಿಯಲ್ಲಿರುವವರಲ್ಲವೇ. ಆದರೆ ನಿಮ್ಮದು ಜಂಜಾಟವಿರುವ ಪ್ರವೃತ್ತಿ ಅಲ್ಲ, ಸುಖದ ಪ್ರವೃತ್ತಿಯು ದೊರೆತುಬಿಟ್ಟರೆ ಇನ್ನೇನು ಬೇಕು, ನನ್ನಂತಹ ಸಂಗಾತಿಯು ಯಾರಿಗಾದರೂ ದೊರೆಯುವುದು ಅಸಂಭವ, ಸಂಗಾತಿಯನ್ನು ಜೊತೆಯಲ್ಲಿ ಇಟ್ಟುಕೊಳ್ಳಿರಿ ಜೊತೆಯಲ್ಲಿಟ್ಟುಕೊಂಡರೆ ಮನಸ್ಸು ಸದಾ ಪ್ರಫುಲ್ಲಿತವಾಗಿರುವುದು. ಒಳ್ಳೆಯದು.

**ಮಾತೆಯರೊಂದಿಗೆ**: ನಿರ್ಮೋಹಿ ಆಗಿದ್ದೀರಾ? ನಷ್ಟಮೋಹಿ ಆಗಿದ್ದೀರಲ್ಲವೇ. ಮಾತೆಯರಿಗೆ ವಿಶೇಷವಾಗಿ ಮೋಹದ್ದೇ ವಿಘ್ನವು ಬರುತ್ತದೆ. ನಷ್ಟಮೋಹ ಆದರೆ ತೀವ್ರಪುರುಷಾರ್ಥ ಮಾಡಬಹುದು. ಒಂದುವೇಳೆ ದೇಹದಲ್ಲಿ ಅಥವಾ ದೇಹದ ಸಂಬಂಧದಲ್ಲಿ ಸ್ವಲವಾದರೂ ಮೋಹ ಇದ್ದರೆ ತೀವ್ರ ಪರುಷಾರ್ಥಿಗೆ ಬದಲಾಗಿ ಪುರುಷಾರ್ಥಿ ಆಗಿಬಿಡುತ್ತೀರಿ. ತೀವ್ರ ಪ್ರರುಷಾರ್ಥಿಗಳು ಮೊದಲನೆಯ ದರ್ಜೆಯವರು ಹಾಗೂ ಪುರುಷಾರ್ಥಿಗಳು ಎರಡನೆಯ ದರ್ಜೆಯವರು, ಏನೇ ಸಂಭವಿಸಲಿ, ಏನೇ ನಡೆಯಲಿ ಆನಂದದಲ್ಲಿ ನರ್ತಿಸುತ್ತಾ ಇರಿ. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ ಎನ್ನುವುದನ್ನೇ ನಷ್ಟಮೋಹ ಎಂದು ಕರೆಯಲಾಗುತ್ತದೆ. ನಷ್ಟಮೋಹ ಆಗಿರುವವರೇ ವಿಜಯಮಾಲೆಯ ಮಣಿ ಆಗುತ್ತಾರೆ. ಮೋಹದ ಮೇಲೆ ಜಯಗಳಿಸಿದರೆ ಸದಾ ಜಯಶಾಲಿಗಳಾಗುತ್ತಾರೆ. ಕೇವಲ ಉತ್ತೀರ್ಣರಾಗಿದ್ದೀರೋ ಅಥವಾ ಪೂರ್ಣ ಉತ್ತೀರ್ಣರಾಗಿದ್ದೀರೋ? ಅನೇಕ ಪರೀಕ್ಷೆಗಳು ಬರುವುವು. ಪರೀಕ್ಷೆಯು ಬರುವುದು ಎಂದರೆ ಮುಂದಿನ ತರಗತಿಗೆ ಹೋಗುವುದು. ಪರೀಕ್ಷೆಯೇ ನಡೆಯದಿದ್ದರೆ ವರ್ಗದ ಬದಲಾವಣೆ ಹೇಗೆ ಆಗುವುದು? ಆದ್ದರಿಂದ ಪೂರ್ತಿ ಉತ್ತೀರ್ಣರಾಗಬೇಕೇ ಹೊರತು ಕೇವಲ ಉತ್ತೀರ್ಣರಾಗುವುದಿಲ್ಲ. ಒಳ್ಳೆಯದು.

**ಯುಗಲರೊಂದಿಗೆ**: ಸ್ಮೃತಿಯಿಂದ ಹಳೆಯ ಸಂಬಂಧವನ್ನು ತೊರೆದು ಮುಕ್ತಾಯ ಮಾಡಿಕೊಂಡು ಹೊಸದನ್ನು ಪ್ರಾರಂಭಮಾಡಿರಿ. ಮಾಯೆಯ ಸಂಬಂಧಕ್ಕೆ ವಿಚ್ಛೇದನ ಕೊಟ್ಟುಬಿಟ್ಟು ತಂದೆಯ ಸಂಬಂಧದಲ್ಲಿ ಕೊಡು-ತೆಗೆದುಕೊಳ್ಳುವುದನ್ನು ಮಾಡಿರಿ. ಅದರಿಂದ ಮಾಯಾಜೀತರೂ, ಮೋಹಜೀತರೂ, ವಿಜಯಶಾಲಿಗಳೂ ಆಗಿರುವಿರಿ. ಸಹಯೋಗಿಯೇನೋ ಆಗಿದ್ದೀರಿ, ಆದರೆ ಸಂಗಾತಿ ಆಗಿಲ್ಲ, ಸಂಗಾತಿಯ ಭಾವನೆ ಬರುತ್ತದೆ ಹಾಗೂ ಹೋಗಿಬಿಡುತ್ತದೆ. ಯಾರು ತಂದೆಯ ನೆನಪಿನಲ್ಲಿರುತ್ತೀರೋ ಅವರಮೇಲೆ ತಂದೆಯ ಅಭಯ ಹಸ್ತವು ಸದಾಕಾಲ ಇರುತ್ತದೆ. ಎಲ್ಲರೂ ಅತಿ ಭಾಗ್ಯಶಾಲಿಗಳಾಗಿದ್ದೀರಿ. ಅನೇಕರು ಕುಳಿತಿದ್ದಂತೆಯೇ ಭಗವಂತನು ಸಿಕ್ಕಮೇಲೆ ಅದಕ್ಕಿಂತಲೂ ದೊಡ್ಡ ಭಾಗ್ಯವು ಬೇರೇನುಬೇಕು. ಯಾವುದು ಕನಸಿನಲ್ಲಿಯೂ ಇರಲಿಲ್ಲವೋ ಅದು ಕಾರ್ಯಗತ ಆಗಿಬಿಟ್ಟರೆ ಇನ್ನೇನುಬೇಕು? ತಂದೆಯು ನಿಮ್ಮ ಬಳಿ ಮೊದಲು ಬಂದರು. ಆಮೇಲೆ ನೀವು ಬಂದಿದ್ದೀರಿ. ನಿಮ್ಮ ಈ ಭಾಗ್ಯದ ವರ್ಣನೆಯನ್ನು ಮಾಡುತ್ತಾ ಸದಾ ಖುಷಿಯಿಂದ ಇರಿ. ಭಗವಂತನನ್ನು ನಾನು ನನ್ನವನನ್ನಾಗಿ ಮಾಡಿಕೊಂಡಿದ್ದೇನೆ ಎನ್ನುವ ಖುಷಿ ಇರಲಿ. ಎಲ್ಲಿಯೇ ಇದ್ದರೂ ತಂದೆಯ ಜೊತೆ ಸದಾ ಇರಲಿ, ಪ್ರತಿಯೊಂದು ಕರ್ಮ ಹಾಗೂ ಪ್ರತಿದಿನದ ದಿನಚರಿಯಲ್ಲಿ ಸದಾ ತಂದೆಯ ಜೊತೆಯ ಅನುಭವ ಮಾಡಿರಿ. ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-12-1978.

***ಸರ್ವ ಖಜಾನೆಗಳಿಗೆ ಬೀಗದ ಕೈ ಏಕ್‌ನಾಮಿ ಆಗುವುದು***

ಏಕ್‌ನಾಮಿ ಆಗುವುದರಿಂದ ತಂದೆಯನ್ನು ಸ್ನೇಹದ ಸಂಬಂಧದಲ್ಲಿ ಬಂಧಿಸಬಲ್ಲ ಶ್ರೇಷ್ಠ ಅದೃಷ್ಟವನ್ನು ಪಡೆದು, ಕ್ಷಣದಲ್ಲಿ ಏನು ಬೇಕಾದರೆ ಅದನ್ನು ಪ್ರಾಪ್ತಿ ಮಾಡಿಕೊಳ್ಳಬಹುದು, ಯಾವ ಕಾಲವನ್ನಾದರೂ ತಿಳಿದುಕೊಳ್ಳಬಹುದು, ಯಾವ ಲೋಕಕ್ಕಾದರೂ ಹೋಗಬಹುದು ಯಾವ ಸಮಯದಲ್ಲಿ ಯಾವ ಶಕ್ತಿ ಬೇಕಾದರೆ ಆ ಶಕ್ತಿಯನ್ನು ಆಜ್ಞೆ ಹಾಕಿದ ಕೂಡಲೇ ಕಾರ್ಯದಲ್ಲಿ ಬಳಸಬಹುದು, ಪ್ರತಿ ವಿಷಯದಲ್ಲಿ ನಿರ್ಭಯವಾಗಿ ಇರಬಹುದು, ಅರ್ಥಾತ್ ಸರ್ವ ಖಜಾನೆಗಳನ್ನು ಪಡೆಯಬಹುದು ಮತ್ತು ಈ ಏಕ್‌ನಾಮಿ ಆಗುವುದೇ ಸರ್ವ ಖಜಾನೆಗಳಿಗೆ ಬೀಗದ ಕೈ. ಇದನ್ನು ಉಪಯೋಗಿಸಿ ಜ್ಞಾನ ಸ್ವರೂಪರಾಗಿರಿ, ಬುದ್ಧಿಯುಳ್ಳವರಾಗಿರಿ. ಹೊಸಬರಾದರೂ, ಹಳೆಯವರಾದರೂ ಸಣ್ಣವರಾದರೂ ದೊಡ್ಡವರಾದರೂ ಈ ಕೀಲಿ ಕೈಯನ್ನು ಉಪಯೋಗಿಸಬಲ್ಲರು. ಎಂದು ಹೇಳುತ್ತಾ ಶಿವ ತಂದೆ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ನೇಹದ ಸಂಬಂಧದಿಂದ ನಿರಾಕಾರನನ್ನು ಸಾಕಾರದಲ್ಲಿ, ಮಾತಿಗೆ ಅತೀತವಾದ ತಂದೆಯನ್ನು ಮಾತಿನಲ್ಲಿ ತಂದಿರುವ ಶ್ರೇಷ್ಠ ಅದೃಷ್ಟಶಾಲಿ.

2.ಈಶ್ವರೀಯ ಸಂತಾನ, ಮಾಸ್ಟರ್ ರಚಯಿತ, ಮಾಸ್ಟರ್ ಸರ್ವಶಕ್ತಿವಂತನಾದ ನನ್ನ ಮುಂದೆ ಪ್ರಕೃತಿ ಮತ್ತು ಪರಿಸ್ಥಿತಿಗಳು ದಾಸಿ.

3. ನಾನು ನನ್ನ ಸತ್ವಗುಣಿ ಸ್ಥಿತಿಯಿಂದ ತಮೋಗುಣಿ ಪ್ರಕೃತಿಯನ್ನು ಪರಿವರ್ತನೆ ಮಾಡಿ, ಸ್ವಸ್ಥಿತಿಯಿಂದ ಪರಿಸ್ಥಿತಿಯ ಮೇಲೆ ವಿಜಯವನ್ನು ಪಡೆದಿರುವ ಮಾಸ್ಟರ್ ರಚಯಿತನು, ಶಕ್ತಿಶಾಲಿ.

4. ನಾನು ಮಂತ್ರಗಾರಿಕೆಯ ಬೀಗದ ಕೈ (ಏಕ್ ನಾಮಿ: ಒಂದೇ ತಂದೆಯ ಹೆಸರು) ಇಂದ ಒಂದು ಕ್ಷಣದಲ್ಲಿ ಯಾವ ಲೋಕಕ್ಕೆ ಬೇಕಾದರೆ ಆ ಲೋಕಕ್ಕೆ ಹೋಗಿ, ಯಾವ ಕಾಲವನ್ನು ಬೇಕಾದರೆ ಆ ಕಾಲವನ್ನು ತಿಳಿದುಕೊಳ್ಳುವ ಆತ್ಮಿಕ ಜ್ಯೋತಿಷ್ಯನು.

5. ನಾನು ತಂದೆಯ ಹೆಸರನ್ನು ಪ್ರಸಿದ್ಧಿ ಮಾಡುವ ಏಕ್‌ನಾಮಿ.

6. ನಾನು ಸದಾ ನಿರ್ಭಯವಾಗಿರುವ ಮಹಾಕಾಲನ ಮಗುವಾಗಿದ್ದೇನೆ